ಅಧ್ಯಕ್ಷರು,—ಈಗ ಎರಡನೆಯ ಗಮನ ಸೆಳೆಯುವ ಸೂಚನೆ ಶ್ರೀ ಜಿ. ಮಾದೇಗೌಡರದ್ದು.

೨) ಹಾರಂಗಿ ಮತ್ತು ಹೇಮಾವತಿ ಜಲಾಶಯಗಳಿಂದ ೫ ಟಿ.ಎಂ.ಸಿ. ನೀರನ್ನು ಕೆ.ಆರ್.ಎಸ್ ಅಚ್ಚುಕಟ್ಟು ಪ್ರದೇಶದ ಕಬ್ಬಿನ ಬೆಳೆಗೆ ಬಿಡುಗಡೆ ಮಾಡುವ ಬಗ್ಗೆ

ಶ್ರೀ ಜಿ. ಮಾದೇಗೌಡ,—ಹಾರಂಗಿ ಮತ್ತು ಹೇಮಾವತಿ ಜಲಾಶಯಗಳಿಂದ ೫ ಟಿ.ಎಂ.ಸಿ. ಎಫ್.ಟಿ ನೀರನ್ನು ಕೆ.ಆರ್.ಎಸ್. ಅಚ್ಚುಕಟ್ಟು ಪ್ರದೇಶದ ಕಬ್ಬಿನ ಬೆಳೆಗೆ ಬಿಡುಗಡೆ ಮಾಡುವ ಬಗ್ಗೆ ನಾನು ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಹಾಗೂ ನೀರಾವರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕೃಷ್ಣರಾಜಸಾಗರ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದು ನಿಂತಿರುವ ಸುಮಾರು ೬೫,೦೦೦ ಸಾವಿರ ಎಕರೆ ಕಬ್ಬಿನ ಫಸಲು ನೀರಿಲ್ಲದೆ ಒಣಗುತ್ತಿರುವುದರಿಂದ ಕೃಷ್ಣರಾಜಸಾಗರ ಜಲಾಶಯಕ್ಕೆ ಹಾರಂಗಿ ಮತ್ತು ಹೇಮಾವತಿ ಜಲಾಶಯಗಳಿಂದ ೫ ಟಿ.ಎಂ.ಸಿ. ನೀರನ್ನು ಬಿಡುಗಡೆ ಮಾಡಿ ಬೆಳೆದಿಂ ನಿಂತಿರುವ ಕಬ್ಬಿನ ಫಸಲನ್ನು ಉಳಿಸುವ ಬಗ್ಗೆ ಸರ್ಕಾರದ ಗಮನವನ್ನು ಮಾನ್ಯ ಶಾಸಕರು ಸೆಳೆದಿರುತ್ತಾರೆ.

ದಿನಾಂಕ. ೮-೫-೮೮ರಂದು ಕೃಷ್ಣರಾಜಸಾಗರ ಜಲಾಶಯದ ನೀರಿನ ಮಟ್ಟವು ೮೨.೧೦ ಅಡಿ ಇದ್ದು, ನೀರಾವರಿಗೆ ಲಭಿಸುವ ನಿವ್ವಳ ಜಲ ಸಂಗ್ರಹಣೆ ೨೦೬೬ ದಶಲಕ್ಷ ಘನ ಅಡಿಗಳಷ್ಟಿರುತ್ತದೆ.

ಕೃಷ್ಣರಾಜಸಾಗರದಲ್ಲಿ ಬೆಳೆದು ನಿಂತಿರುವ ಸುಮಾರು ೧,೪೯,೨೦೦ ಎಕರೆ ಬೇಸಿಗೆ ಬೆಳೆಗೆ (ಸುಮಾರು ೭೫,೦೦೦ ಎಕರೆ ಕಬ್ಬು, ಸುಮಾರು ೪೪,೯೦೦ ಎಕರೆ ಅರೆ ಖುಷ್ಕಿ ಮತ್ತು ಸುಮಾರು ೩೧,೪೦೦ ಎಕರೆ ಅನಧಿಕೃತ ಭತ್ತ) ಶೀನೇ ಕಂತಿನ ನೀರನ್ನು ದಿನಾಂಕ. ೧೦-೫-೮೮ ರಿಂದ ೧೫ ದಿನಗಳ ಅವಧಿಗೆ ಒದಗಿಸಲು ಬೇಕಾಗುವ ನೀರಿನ ಪರಿಮಾಣ ೪,೬೦೦ ದಶಲಕ್ಷ ಘನ ಅಡಿಗಳು. ಈ ಅವಧಿಯಲ್ಲಿ ಜಲಾಶಯಕ್ಕೆ ಹರಿದು ಬರುವ ನೀರನ್ನು (ಸುಮಾರು ೩೫೦ ದಶ ಲಕ್ಷ ಘನ ಅಡಿ) ಪರಿಗಣಿಸಿದರೆ, ನೀರಾವರಿಗೆ ಬೇಕಾಗುವ ನೀರಿನ ಪರಿಮಾಣ ೪,೩೫೦ ದಶಲಕ್ಷ ಘನ ಅಡಿಗಳು. ಎಂದರೆ, ಜಲಾಶಯದಲ್ಲಿರುವ ೨೦೬೬ ದಶಲಕ್ಷ ಘನ ಅಡಿಗಳ ಜೊತೆಗೆ ಕೊರತೆ ಬೀಳುವ ನೀರಿನ ಪರಿಮಾಣ ಸುಮಾರು ೨೦೪೪ ದಶ ಲಕ್ಷ ಘನ ಅಡಿಗಳು.

ಹಾರಂಗಿ ಮತ್ತು ಹೇಮಾವತಿ ಜಲಾಶಯಗಳಲ್ಲಿ ಬೆಳೆದು ನಿಂತಿರುವ, ಬೇಸಿಗೆ ಬೆಳೆಗಳಿಗೆ ಮತ್ತು ಕುಡಿಯುವ ನೀರಿನ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು, ಈ ಕೊರತೆಯನ್ನು ನೀಗಿಸಲು ಆ ಜಲಾಶಯಗಳಿಂದ ಕೃಷ್ಣರಾಜಸಾಗರಕ್ಕೆ ನೀರೊದಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(ಗೊಂದಲ)

ಅಧ್ಯಕ್ಷರು — ೧೯೮೮-೮೯ನೇ ಸಾಲಿಗೆ ಸಂಬಂಧಿಸಿದ ಕೆಳಕಂಡ ಅನುದಾನಗಳ ಬೇಡಿಕೆಗಳ ಮೇಲೆ ಚರ್ಚೆ ನಡೆಸುವುದು ಹಾಗೂ ಮತಕ್ಕೆ ಹಾಕಬೇಕಾಗಿದೆ. ಬೇಡಿಕೆ ಸಂಖ್ಯೆ ೧ ಮತ್ತು ೩.

(ಗೊಂದಲ)

(ಕಾಂಗ್ರೆಸ್-ಐ ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು.— ಈಗ ಸಭೆಯನ್ನು ೧೦ ನಿಮಿಷ ಮುಂದಕ್ಕೆ ಹಾಕಲಾಗಿದೆ.

(ಸಭೆಯು ೩ ಗಂಟೆ ೨೭ ನಿಮಿಷಕ್ಕೆ ಸರಿಯಾಗಿ ೧೦ ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)

(ಸಭೆಯು ಪುನಃ ೪-೫೫ಕ್ಕೆ ಸಮಾವೇಶಗೊಂಡಿತು)

(ಶ್ರೀ ಬಿ.ಜಿ. ಬಣಕಾರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)